## ಕಾರ್ಪೊರೇಟ್ ಮಾಹಿತಿ ಅಳಿಸುವುದು ಹೇಗೆ?

ಕಂಪೆನಿಯ ರಹಸ್ಯ ದಾಖಲೆಗಳು ಉದ್ಯೋಗಿಗಳ ಮೊಬೈಲ್ ಫೋನ್ ಅಥವಾ ಟ್ಯಾಬ್ಲೆಟ್‌ನಲ್ಲಿ ಸೋರಿ ಹೋಗದಂತೆ ನಿಗಾ ವಹಿಸಬೇಕೆ? ಇದಕ್ಕೆಂದೇ ಬ್ಲ್ಯಾಕ್‌ಬೆರಿ ತಯಾರಿಸುವ ರಿಸರ್ಚ್ ಇನ್ ಮೋಷನ್ ಪರಿಹಾರ ಕಂಡು ಹಿಡಿದಿದೆ. ಬ್ಲ್ಯಾಕ್‌ಬೆರಿ ಬ್ಯಾಲನ್ಸ್ ತಂತ್ರಜ್ಞಾನವನ್ನು ಭಾರತದ ಐಟಿ ಕಂಪೆನಿಗಳಿಗೆ ಬಿಡುಗಡೆ ಮಾಡಲಾಗಿದೆ.

ಕಂಪೆನಿಯ ಉದ್ಯೋಗ ತ್ಯಜಿಸುವ ಉದ್ಯೋಗಿಗಳ ಹ್ಯಾಂಡ್‌ಸೆಟ್ ಅಥವಾ ಟ್ಯಾಬ್ಲೆಟ್‌ನಲ್ಲಿ ಕಾರ್ಪೊರೇಟ್ ಮಾಹಿತಿಯನ್ನಷ್ಟೇ ಅಳಿಸಿ ಹಾಕಬಹುದು. ಆದರೆ ಉದ್ಯೋಗಿಯ ವೈಯಕ್ತಿಕ ಮಾಹಿತಿಗೆ ಧಕ್ಕೆಯಾಗದೇ ಹಾಗೇ ಉಳಿಸಬಹುದು. ಈ ತಂತ್ರಜ್ಞಾನದಿಂದ ಉದ್ಯೋಗಿಗಳು ಬಳಸುವ ಕಾರ್ಪೊರೇಟ್ ಮಾಹಿತಿಯ ಮೇಲೆ ಕಂಪೆನಿ ನಿಗಾ ಇಡಬಹುದು.




## ವೆಬ್ ಅಭಿವೃದ್ಧಿಗೆ ಶಾಡೊ

ಮೊಬೈಲ್ ವೆಬ್ ಅಭಿವೃದ್ಧಿಪಡಿಸುವವರಿಗೆ ಅಡೋಬ್ ಹೊಸ ಟೂಲ್ ಶಾಡೋವನ್ನು ಬಿಡುಗಡೆ ಮಾಡಿದೆ. ಇದರಿಂದ ವಿವಿಧ ಡಿವೈಸ್‌ಗಳಲ್ಲಿ ಹರಿದಾಡುವ ಅಪ್ಲಿಕೇಶನ್‌ಗಳನ್ನು ಏಕಕಾಲಕ್ಕೆ ನೀವು ವೀಕ್ಷಿಸಬಹುದು.

ವೆಬ್ ಪೇಜ್ ಅನ್ನು ತೆರೆದು ನಂತರ ಶಾಡೋವನ್ನು ಕ್ಲಿಕ್ ಮಾಡಿ. ಅದಕ್ಕೂ ಮುನ್ನ ನಿಮ್ಮ ಮೊಬೈಲ್ ಫೋನ್ ಡೆಸ್ಕ್‌ಟಾಪ್ ಕಂಪ್ಯೂಟರ್‌ಗೆ ವೈಫಿ ಮೂಲಕ ಸಂಪರ್ಕದಲ್ಲಿರಬೇಕು. ಶಾಡೋ ಕಾರ್ಯನಿರತವಾದ ಕೂಡಲೇ ನೀವು ಅಭಿವೃದ್ಧಿಪಡಿಸುತ್ತಿರುವ ಪ್ರತಿ ವೆಬ್ ಪೇಜ್‌ನಲ್ಲಿ ಯಾವುದು ಇನ್ನೂ ಸಂಪೂರ್ಣವಾಗಿಲ್ಲ, ಯಾವುದು ಕೆಲಸ ಮಾಡುತ್ತಿದೆ ಎಂಬುದು ನಿಮಗೆ ಗೊತ್ತಾಗುತ್ತದೆ. ಸದ್ಯ ಶಾಡೊ ಅಪ್ಲಿಕೇಶನ್ ಆ್ಯಂಡ್ರಾಯ್ಡ್‌ನಲ್ಲಿ ಲಭ್ಯ.

## ಕಡಿಮೆ ವೆಚ್ಚದ ಸರ್ವರ್ ಡಿವೈಸ್

ಎನ್‌ಕಂಪ್ಯೂಟಿಂಗ್ ಭಾರತದಲ್ಲಿ ಎಂ300 ಡಿವೈಸ್ ಬಿಡುಗಡೆ ಮಾಡಿದೆ. ಇದು ಕಂಪೆನಿಯ ಸ್ಪೇಸ್ ಸರ್ವರ್ 6.6 ಡೆಸ್ಕ್‌ಟಾಪ್ ವರ್ಚುವಲೈಸೇಸನ್ ಸಾಫ್ಟ್‌ವೇರ್ ಮೇಲೆ ಕಾರ್ಯನಿರ್ವಹಿಸುತ್ತದೆ. ಒಟ್ಟಿಗೆ 45 ಕಂಪ್ಯೂಟರ್‌ಗಳು ಕಾರ್ಯನಿರ್ವಹಿಸಬಹುದು. ಆದರೆ ವೆಚ್ಚ ಹಾಗೂ ವಿದ್ಯುತ್ ಬಳಕೆ ಮೂರನೇ ಒಂದರಷ್ಟು.

ಕಾಲೇಜಿನ ಒಂದು ತರಗತಿ, ಪ್ರಯೋಗಾಲಯ, ಗ್ರಂಥಾಲಯ, ಕಾಲ್ ಸೆಂಟರ್ ಮೊದಲಾದ ಕಡೆ ಇದನ್ನು ಬಳಸಿಕೊಳ್ಳಬಹುದು. ಇದನ್ನು ಎಂ300 3 ಇನ್ ಒನ್ ಎಂದು ಕರೆಯಲಾಗುತ್ತಿದ್ದು ಏಕೈಕ ಲ್ಯಾನ್ ಪೋರ್ಟ್ ಮತ್ತು ಏಕೈಕ ವಿದ್ಯುತ್ ಪ್ಲಗ್ ಮೇಲೆ ಕೆಲಸ ಮಾಡುತ್ತದೆ. ಈ ಡಿವೈಸ್ ವಿಂಡೋಸ್ ಮತ್ತು ಲಿನುಕ್ಸ್ ಜೊತೆ ಹೊಂದಿಕೊಳ್ಳುತ್ತದೆ.



## ಭಾವಚಿತ್ರ ಗುರುತಿಸುವ ಅಪ್ಲಿಕೇಶನ್

ಐಫೋನ್ ಬಳಕೆದಾರರಿಗೆ ಕ್ಲಿಕ್ ಎಂಬ ಹೊಸ ಅಪ್ಲಿಕೇಶನ್ ಉಚಿತವಾಗಿ ಲಭ್ಯವಿದೆ. ಫೇಸ್‌ಬುಕ್ ಐಡಿ ಇರುವವರು ಇದಕ್ಕೆ ಲಾಗಾನ್ ಆದರೆ ಸಾಕು. ಫೇಸ್‌ಬುಕ್‌ನಲ್ಲಿರುವ ನಿಮ್ಮ ಸ್ನೇಹಿತರ ಭಾವಚಿತ್ರದ ಮೇಲೆ ಕರ್ಸರ್ ತೆಗೆದುಕೊಂಡು ಹೋದರೆ ಅದರ ಮೇಲೆ ಆ ಸ್ನೇಹಿತರ ಹೆಸರು ಮೂಡುತ್ತದೆ.

ಈಗಾಗಲೇ ನಿಮ್ಮ ಫೇಸ್‌ಬುಕ್ ಅಕೌಂಟ್‌ನಲ್ಲಿರುವ ಸ್ನೇಹಿತರನ್ನು ಈ ಅಪ್ಲಿಕೇಶನ್ ಚೆನ್ನಾಗಿ ಗುರುತಿಸುತ್ತದೆ. ಅಕೌಂಟ್‌ನಲ್ಲಿಲ್ಲದ ಸ್ನೇಹಿತರ ಭಾವಚಿತ್ರಗಳನ್ನು ಹಾಕಿ ಅದಕ್ಕೆ ಒಂದು ಹೆಸರು ನೀಡಿದರೆ ಸಾಕು. ಮುಂದೆ ಅದೇ ಹೆಸರಿನಿಂದ ಈ ಅಪ್ಲಿಕೇಶನ್ ಮೂಲಕ ಗುರುತಿಸಲು ಸಾಧ್ಯ. ಆದರೆ ಅಪ್ಲಿಕೇಶನ್ ಅನ್ನು ಆಗಾಗ ಬಳಸಿ. ಇದರಿಂದ ಅಪ್ಲಿಕೇಶನ್ ಶೀಘ್ರ ಕೆಲಸ ಮಾಡುತ್ತದೆ.

ಈ ಅಪ್ಲಿಕೇಶನ್ 3ಜಿ/ ವೈ-ಫಿ ಸಂಪರ್ಕವಿದ್ದಾಗ ವೇಗವಾಗಿ ಕಾರ್ಯನಿರ್ವಹಿಸುತ್ತದೆ. ಕೆಲವೇ ಸೆಕೆಂಡ್‌ನಲ್ಲಿ ವ್ಯಕ್ತಿಯನ್ನು ಗುರುತಿಸುತ್ತದೆ. ಆದರೆ ಜಿಪಿಆರ್‌ಎಸ್‌ನಲ್ಲಿ ಬಹಳ ನಿಧಾನ. ಭಾವಚಿತ್ರದ ಮೇಲೆ ಪ್ರಶ್ನಾರ್ಥಕ ಚಿಹ್ನೆಯನ್ನು ಮಾತ್ರ ನೀವು ಕಾಣಬಹುದು. ಐಪಾಡ್ ಮತ್ತು ಐಪ್ಯಾಡ್‌ನಲ್ಲೂ ನಿಧಾನ. ಆದರೆ ಐಫೋನ್‌ನಲ್ಲಿ ಚೆನ್ನಾಗಿ ಕೆಲಸ ಮಾಡುತ್ತದೆ.

## ಧ್ವನಿ ಗುರುತಿಸುವ ಬ್ರೌಸರ್

ಆ್ಯಂಡ್ರಾಯ್ಡ್‌ನಲ್ಲಿರುವ ಬ್ರೌಸರ್ ಡಾಲ್ಫಿನ್ 7.4 ಎಚ್‌ಡಿ ಧ್ವನಿ ಗುರುತಿಸುವ ಅಂಶ ಹೊತ್ತು ಹೊಸ ಅವತಾರದಲ್ಲಿ ಕಾಲಿಟ್ಟಿದೆ. ಈ ಬ್ರೌಸರ್ ಅನ್ನು ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿದಾಗ ಮೈಕ್ರೊಫೋನ್ ಚಿತ್ರ ಮೂಡುತ್ತದೆ. ನೀವು ನಿಮಗೆ ಬೇಕಾದ ವೆಬ್ ಹೆಸರನ್ನು ಹೇಳಿದರೆ ಸಾಕು, ಅದು ಡೌನ್‌ಲೋಡ್ ಆಗುತ್ತದೆ. ನಿಮಗೆ ಬಿಬಿಸಿ ನ್ಯೂಸ್ ವೆಬ್ ಬೇಕಾದರೆ 'ನ್ಯೂಸ್ ಡಾಟ್ ಬಿಬಿಸಿ ಡಾಟ್ ಕೊ ಡಾಟ್ ಯುಕೆ' ಎಂದು ಹೇಳಿ. ಕೇವಲ ಬಿಬಿಸಿ ಎಂದು ಹೇಳಿದರೆ ಗೂಗ್ಲ್‌ನಲ್ಲಿರುವ ಎಲ್ಲಾ ಬಿಬಿಸಿ ವೆಬ್‌ಗಳನ್ನೂ ಬ್ರೌಸ್ ಮಾಡಿಬಿಡುತ್ತದೆ. ಆದರೆ ಕೆಲವು ಭಾರತೀಯ ವೆಬ್‌ಸೈಟ್ ಹೆಸರುಗಳ ಉಚ್ಚಾರಣೆಯನ್ನು ಗ್ರಹಿಸುವಾಗ ಗೊಂದಲ ಮೂಡುತ್ತದೆ. ಯಾವುದಾದರೂ ಪೇಜ್ ಅನ್ನು ಬುಕ್‌ಮಾರ್ಕ್ ಮಾಡುವುದಿದ್ದರೆ 'ಬುಕ್‌ಮಾರ್ಕ್' ಎಂದು ಹೇಳಿದರೆ ಸಾಕು.

■ ಎಸ್.ತುಂಬೆ